# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 580
2. ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 24.09.2020
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಮಹಾರಾಷ್ಟ್ರ ಹಾಗೂ ಉತ್ತರ ಕರ್ನಾಟಕ ರಾಜ್ಯದ ಜಂಟಿ ಸಹಭಾಗಿತ್ವದ ಉತ್ತರ ಕರ್ನಾಟಕ ಮಹಾತ್ವಾಕಾಂಕ್ಷೆ ಯೋಜನೆಯಾದ ದೂಧಗಂಗಾ ಯೋಜನೆಗೆ ಸಂಬಂಧಿಸಿದಂತೆ ಈವರೆಗೂ ಕಾಮಗಾರಿ ಪೂರ್ಣಗೊಳ್ಳದಿರುವ ಬಗ್ಗೆ ಸರ್ಕಾರದ ನಿಲುವೇನು; | ದೂಧಗಂಗಾ ಯೋಜನೆಯು ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ಜಂಟಿ ಸಹಭಾಗಿತ್ವದ ಯೋಜನೆಯಾಗಿರುತ್ತದೆ. ಕ್ರಮವಾಗಿ 85:15 ರ ಅನುಪಾತದಲ್ಲಿ ಪಾಲುದಾರಿಕೆಯಿಂದ ಯೋಜನೆ ಅನುಷ್ಠಾನಗೊಳಿಸಲಾಗುತ್ತದೆ. ಮಹಾರಾಷ್ಟ್ರ ರಾಜ್ಯದಲ್ಲಿಯ ದೂಧಗಂಗಾ ಎಡದಂಡೆ ಕಾಲುವೆ ಕಾಮಗಾರಿಗಳು ನಿರ್ಮಾಣ ಹಂತದಲ್ಲಿದ್ದು ಕಾಮಗಾರಿಗಳು ನಿಧಾನಗತಿಯಲ್ಲಿರುತ್ತವೆ. ಮಹಾರಾಷ್ಟ್ರ ರಾಜ್ಯದಲ್ಲಿನ ಕಾಲುವೆ ಕಾಮಗಾರಿಗಳು ಪೂರ್ಣಗೊಳ್ಳದೇ ಇರುವುದರಿಂದ ಕರ್ನಾಟಕ ರಾಜ್ಯದಲ್ಲಿನ ದತ್ತವಾಡ ಶಾಖಾ ಕಾಲುವೆ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.<br><br>ಈ ಯೋಜನೆಯ ಎಲ್ಲಾ ಕಾಲುವೆ ಕಾಮಗಾರಿಗಳು ಪೂರ್ಣಗೊಳಗಳ್ಳುವ ವರೆಗೆ ಮಧ್ಯಂತರ ಪರಿಹಾರವಾಗಿ ದೂಧಗಂಗಾ ಅಂತರ್‌ರಾಜ್ಯ ಯೋಜನೆಯ ಒಪ್ಪಂದದ ಕಂಡಿಕೆ 2.10 ರನ್ವಯ ಕರ್ನಾಟಕದ ಪಾಲಿನ 4.00 ಟಿ.ಎಂ.ಸಿ ನೀರನ್ನು ದೂಧಗಂಗಾ ಹಾಗೂ ವೇದಗಂಗಾ ನದಿಗಳ ಮುಖಾಂತರ ಪ್ರತಿ ವರ್ಷ ಬಿಡಿಸಿಕೊಳ್ಳಲಾಗುತ್ತಿದೆ. ಕರ್ನಾಟಕದ ರೈತರುಗಳು ವೈಯಕ್ತಿಕ ಮತ್ತು ಸಾಮೂಹಿಕ ಏತ ನೀರಾವರಿಗಳ ಮುಖಾಂತರ ತಮ್ಮ ಜಮೀನುಗಳಿಗೆ ನೀರನ್ನು ಹರಿಸಿಕೊಳ್ಳುತ್ತಿರುವರು. ಸದರಿ ಕಾಲುವೆಗಳ ಪ್ರಗತಿಯ ಕುರಿತು ಕರ್ನಾಟಕ ಸರ್ಕಾರದ ಅಧಿಕಾರಿಗಳು, ಮಹಾರಾಷ್ಟ್ರ ಸರ್ಕಾರದ ಜೊತೆಗೆ Sub Committee meeting ಮತ್ತು ಸ್ಥಾಯಿ ಸಮಿತಿ (Standing Committee) ಸಭೆಗಳ ಮುಖಾಂತರ ಮೇಲಿಂದ ಮೇಲೆ ಚರ್ಚಿಸಿ ವಿಳಂಬವಾದ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಪ್ರಯತ್ನಿಸಲಾಗುತ್ತಿದೆ. |
| ಆ) | ಈ ಜಂಟಿ ಯೋಜನೆಯನ್ನು ಯಾವಾಗ ಹಮ್ಮಿಕೊಳ್ಳಲಾಗಿತ್ತು; ಸದರಿ ಯೋಜನೆಗೆ ಅಂದಾಜು ಮಾಡಲಾಗಿದ್ದ ಒಟ್ಟು ಹಣವೆಷ್ಟು; (ವಿವರ ನೀಡುವುದು) | ಸದರಿ ಯೋಜನೆಯ ಬಗ್ಗೆ ಕರ್ನಾಟಕ ಮತ್ತು ಮಹಾರಾಷ್ಟ್ರ ಸರ್ಕಾರದ ನಡುವೆ **ದಿನಾಂಕ: 18/08/2001** ರಲ್ಲಿ ಒಡಂಬಡಿಕೆ ಆಗಿದ್ದು, ಅದರಲ್ಲಿ ಕರ್ನಾಟಕದ ಷೇರು ಶೇಕಡಾ 15 ರಷ್ಟು ಹಾಗೂ ಮಹಾರಾಷ್ಟ್ರದ ಶೇರು ಶೇಕಡಾ 85 ರಷ್ಟು ಇರುತ್ತದೆ. ಸದರಿ ಯೋಜನೆಯ 3ನೇ ಪರಿಷ್ಕೃತ ಅಂದಾಜು ಮೊತ್ತ ರೂಪಾಯಿ 1712.80 ಕೋಟಿಗಳಾಗಿರುತ್ತದೆ. |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಇ) | ಈ ಜಂಟಿ ಯೋಜನೆ ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೂ ವೆಚ್ಚವಾದ ಒಟ್ಟು ಹಣವೆಷ್ಟು; (ವರ್ಷವಾರು ವಿವರ ನೀಡುವುದು) | <u>Expenditure done by Karnataka Govt.</u><br>Total expenditure made up to 6/2020 (project as a whole since inception) (Including share amount paid to GoM of Rs147.25Crore) ( up to 6/2020) : Rs228.08Crores |
| ಈ) | ಸದರಿ ಯೋಜನೆಯು ಯಾವ ಹಂತದಲ್ಲಿದೆ ಮತ್ತು ಯಾವ ಕಾಲಮಿತಿಯೊಳಗೆ ಯೋಜನೆಯನ್ನು ಪೂರ್ಣಗೊಳಿಸಲಾಗುವುದು; | ದೂಧಗಂಗಾ ಯೋಜನೆಯ ಕಾಮಗಾರಿಗಳನ್ನು ಕೋವಿಡ್ ಸಂಕ್ರಾಮಿಕ ರೋಗ ಹಾಗೂ ಭೂಸ್ವಾಧೀನ, ಅನುದಾನದ ಲಭ್ಯತೆ ಮೇರೆಗೆ ಮತ್ತು ಮಹಾರಾಷ್ಟ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಮನ್ವಯತೆ ವಹಿಸಿ ಹಾಗೂ ಕರ್ನಾಟಕದ ವ್ಯಾಪ್ತಿಗೆ ಬರುವ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೆತ್ತಿಕೊಂಡು 2022-23ನೇ ಸಾಲಿನೊಳಗೆ ಪೂರ್ಣಗೊಳಿಸಲು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| ಉ) | ಸದರಿ ಯೋಜನೆಗೆ ಸಂಬಂಧಿಸಿದಂತೆ ಮಹಾರಾಷ್ಟ್ರ ಸರ್ಕಾರದಿಂದ ಇಲ್ಲಿಯವರೆಗೆ ಬಿಡುಗಡೆಯಾದ ಹಣವೆಷ್ಟು; ಹಾಗೂ ಆ ಸರ್ಕಾರದೊಂದಿಗೆ ಈ ಯೋಜನೆಗೆ ಸಂಬಂಧಿಸಿದಂತೆ ನಡೆದ ಸಭೆಗಳ ಸಂಪೂರ್ಣ ವಿವರ ನೀಡುವುದು? | ಸದರಿ ಯೋಜನೆಗೆ ಸಂಬಂಧಿಸಿದಂತೆ ಮಹಾರಾಷ್ಟ್ರ ಸರ್ಕಾರದಿಂದ ಇಲ್ಲಿಯವರೆಗೆ ರೂ.1177.70 ಕೋಟಿಗಳ (ಜೂನ್-2020ರ ಅಂತ್ಯಕ್ಕೆ) ಅನುದಾನವನ್ನು ಯೋಜನೆಯ ಕಾಮಗಾರಿಗಳಿಗೆ ಬಿಡುಗಡೆಗೊಳಿಸಿರುತ್ತಾರೆ.<br><br>ಈ ಯೋಜನೆಗೆ ಸಂಬಂಧಿಸಿದಂತೆ 14 Sub Committee ಸಭೆಗಳು ಮತ್ತು 15 ಸ್ಥಾಯಿ ಸಮಿತಿ (Standing Committee) ಸಭೆಗಳನ್ನು ಜರುಗಿಸಲಾಗಿದ್ದು, ವಿವರಗಳನ್ನು **ಅನುಬಂಧ-1** ಹಾಗೂ **ಅನುಬಂಧ-2**ರಲ್ಲಿ ಪ್ರತ್ಯೇಕವಾಗಿ ಲಗತ್ತಿಸಲಾಗಿದೆ. |

**ಸಂಖ್ಯೆ: ಜಸಂಇ 87 ಡಬ್ಲ್ಯೂಎಲ್ಎ 2020**

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

## ಅನುಬಂಧ-1

## 14 Sub Committee ಸಭೆ ನಡೆದ ವಿವರಗಳು

| Sl.No. | Meeting | Date | Venue |
|---|---|---|---|
| 1. | 1st meeting | 05.01.2006 | Kolhapur |
| 2. | 2nd meeting | 20.02.2007 | Kolhapur |
| 3. | 3rd meeting | 01.03.2008 | Kolhapur |
| 4. | 4th meeting | 18.11.2008 | Kolhapur |
| 5. | 5th meeting | 23.12.2009 | Kolhapur |
| 6. | 6th meeting | 12.01.2011 | Kolhapur |
| 7. | 7th meeting | 29.08.2011 | Kolhapur |
| 8. | 8th meeting | 28.01.2014 | Kolhapur |
| 9. | 9th meeting | 28.04.2015 | Kolhapur |
| 10. | 10th meeting | 17.12.2015 | Kolhapur |
| 11. | 11th meeting | 19.11.2016 | Kolhapur |
| 12. | 12th meeting | 14.12.2017 | Kolhapur |
| 13. | 13th meeting | 03.12.2018 | Kolhapur |
| 14. | 14th meeting | 26.12.2019 | Kolhapur |

*******

ಅನುಬಂಧ-2

15 ಸ್ಥಾಯಿ ಸಮಿತಿ (Standing Committee) ಸಭೆ ನಡೆದ ವಿವರಗಳು

| Sl.No. | Meeting | Date | Venue |
|---|---|---|---|
| 1. | 1st meeting | 28.02.2002 | Kolhapur |
| 2. | 2nd meeting | 06.03.2002 | Kolhapur |
| 3. | 3rd meeting | 25.10.2002 | Hidkal Dam |
| 4. | 4th meeting | 01.03.2003 | Kolhapur |
| 5. | 5th meeting | 04.02.2004 | Pune |
| 6. | 6th meeting | 02.06.2004 | Pune |
| 7. | 7th meeting | 08.04.2005 | Kolhapur |
| 8. | 8th meeting | 07.01.2006 | Hidkal Dam |
| 9. | 9th meeting | 21.02.2007 | Kolhapur |
| 10. | 10th meeting | 09.03.2008 | HIdkal Dam |
| 11. | 11th meeting | 24.11.2008 | Kolhapur |
| 12. | 12th meeting | 14.02.2012 | HIdkal Dam |
| 13. | 13th meeting | 12.02.2014 | Belgaum |
| 14. | 14th meeting | 04.02.2016 | Kolhapur |
| 15. | 15th meeting | 28.06.2018 | Hidkal Dam |

******